**ಸಿವಿಲ್ ನ್ಯಾಯಾಧೀಶರು  ಮತ್ತು ಜೆ.ಎಮ್.ಎಫ್.ಸಿ., ನ್ಯಾಯಾಲಯ.**

**ಹಿರೇಕೆರೂರು.**

**ಸಿ.ಸಿ.ನಂಬರ್‌ಃ223/2016**

ಸಿಡಬ್ಲ್ಯೂಃ4

ಪಿಡಬ್ಲ್ಯೂಃ4

| | | |
|---|---|---|
| ಸಾಕ್ಷಿಯ ಹೆಸರು | : | ಇಸ್ಮಾಯಿಲ್ ನಾಯಕವಾಡಿ |
| ತಂದೆಯ ಹೆಸರು | : | ನೂರ್ ಅಹಮದ್ ಸಾಬ್ |
| ವಯಸ್ಸು | : | 30 ವರ್ಷ |
| ಉದ್ಯೋಗ | : | ಗೌಂಡಿ ಕೆಲಸ |
| ವಾಸಸ್ಥಳ | : | ಚಿಕ್ಕೇರೂರ |

ಇಂದು ದಿನಾಂಕಃ 08.08.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ** ಮಾನ್ಯ ಎಪಿಪಿಯವರಿಂದಃ

ಚಾಸಾ-1, 3 ಹಾಗೂ 5 ರವರ ಪರಿಚಯ ನನಗೆ ಇರುತ್ತದೆ. ಸಾಕ್ಷಿಗೆ ಕಡತದಲ್ಲಿರುವ ಘಟನಾ ಜಾಗದ ಪಂಚನಾಮೆ ಎಂಬ ದಾಖಲೆಯನ್ನು ತೋರಿಸಲಾಗಿದ್ದು ಅದರಲ್ಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-6 ಎಂದು ಗುರತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-6(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಕಡತದಲ್ಲಿರುವ ನಕಾಶೆಯನ್ನು ನೋಡಿ ಗುರುತಿಸಲಾಗಿದ್ದು ಸದರಿ ದಾಖಲೆಯನ್ನು ನಿಪಿ-10 ಎಂದು, ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ಸುಮಾರು 6-8 ರವರ ವರ್ಷಗಳ ಹಿಂದೆ ನಮ್ಮ ಮನೆಯಲ್ಲಿ ಸಹಿ ಮಾಡಿರುತ್ತೇನೆ. ಸದರಿ ದಾಖಲೆಗಳಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿರುವುದಿಲ್ಲ. ಈ ಪ್ರಕರಣದ ನನಗೆ ಯಾವುದೇ ಮಾಹಿತಿ ಇರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಅಭಿಯೋಜನೆಗೆ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ** ಮಾನ್ಯ ಎಪಿಪಿಯವರಿಂದಃ

ದಿನಾಂಕ 01-02-2016 ರಂದು ಚಾಸಾ-1 ರವರಿಗೆ ಈ ಪ್ರಕರಣದ ಆರೋಪಿತರು ಹೊಡೆದು, ದೆಹಿಕವಾಗಿ ಹಾಗೂ ಮಾನಸಿಕವಾಗಿ ಹಿಂಸೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಆ ರೀತಿ ಚಾಸಾ-1 ಹಾಗೂ ಆರೋಪಿತರು ಜಗಳ ಮಾಡಿಕೊಂಡಿರುವ ಕಾರಣದಿಂದ ಪೋಲಿಸರು ಘಟನಾ

ಸ್ಥಳಕ್ಕೆ ಬೇಟಿ ನೀಡಿದ್ದು ಪಂಚನಾಮೆಯನ್ನು ಮಾಡಿದ್ದು ಆಗ ಸದರಿ ದಾಖಲೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ಸದರಿ ಪಂಚನಾಮೆಯನ್ನು ಬರೆಯಲು ಚಾಸಾ–1 ಹಾಗೂ 5 ರವರು ಮಾಹಿತಿ ನೀಡಿರುತ್ತಾರೆ ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಅ ಸಮಯದಲ್ಲಿ ನನ್ನ ಜೊತೆ ಚಾಸಾ–1, 3 ಮತ್ತು 5 ರವರ ಸಹಿ  ಮಾಡಿರುತ್ತಾರೆ  ಎಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು ಮಾಡುವಾಗ ಬೆಳಿಗೆ 11.30 ಯಿಂದ 12.30 ಆಗಿತ್ತು ಎಂದರೆ ಸರಿ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ  ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿತರ  ಪರ ಶ್ರೀ ವಿ ವಿ ಎಂ  ವಕೀಲರಿಂದಃ

ಆರೋಪಿತರ ಮನೆಯನ್ನು ನಾನು ನೋಡಿರುತ್ತೇನೆ. ಅವರ ಮನೆಯು ಚಿಕ್ಕೇರೂರನ ಕಬಾಡಿ ಗಲ್ಲಿಯಲ್ಲಿ ಇರುತ್ತಾರೆ. ಆರೋಪಿತರು ಸ್ವಂತ ಮನೆಯಲ್ಲಿ ವಾಸವಾಗಿರುತ್ತಾರೆ. ನಮ್ಮ ಮನೆ ಮುಳಅಗಸಿ ಓಣಿಯಲ್ಲಿ ಇರುತ್ತದೆ. ನಮ್ಮ ಮನೆಗೂ ಹಾಗೂ ಆರೋಪಿತರ ಮನೆಗೂ ಸುಮಾರು 2 ಕಿ.ಮೀ ದೂರ ಇರುತ್ತದೆ. ಪೋಲಿಸರು ನನ್ನ ಬಳಿ ಸಹಿ ಪಡೆದುಕೊಳ್ಳುವಾಗ ಆರೋಪಿ ಹಾಗೂ ಆತನ ಹೆಂಡತಿ ಹಾಗೂ ಪೋಲಿಸರು ಬಂದಿದ್ದರು. ಆ ದಿನದಂದು ನಾನು ಆರೋಪಿತರ ಮನೆಯ ಕಡೆಗೆ ಹೋಗಿರುವುದಿಲ್ಲ. ನಾನು ಸಹಿ ಮಾಡಿದ ದಾಖಲೆಗಳ ಮೇಲೆ ಬೇರೆ ಯಾರದಾದರೂ ಸಹಿ ಇತ್ತಾ ಅಥವಾ ಇಲ್ಲವಾ  ಎಂಬುದರ ಬಗ್ಗೆ ನಾನು ಗಮನಿಸಿರುವುದಿಲ್ಲ. ನನ್ನ ಅಕ್ಕನನ್ನು ಚಾಸಾ–1 ರವರ ಸಂಬಂದಿಕರಿಗೆ ಮದುವೆ ಮಾಡಿಕೊಟ್ಟಿರುತ್ತೇವೆ ಎಂದರೆ ಸರಿ. ಆ ಕಾರಣದಿಂದ ನಾವು ಮತ್ತು ಚಾಸಾ–1 ರವರು ನೆಂಟರು ಎಂದರೆ ಸರಿ. ಚಾಸಾ–1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ  ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.